Literacy for a Billion

Movie: Gowri Kalyana
Year: 1991

Song: Nodappa Nanage Sikka Maguvannu
Lyricist: Chi Udayashankar

ಹೂಂ.....
ಹೊಳಲೊಳಲಾಯೀ
ಹಾಯೀ ಹಾಯೀ ಹಾಯೀ
ಹಾಯೀ ಹಾಯೀ ಹೊಳಲೊಳಲಾಯೀ

ನೋಡಪ್ಪಾ ನನಗೆ ಸಿಕ್ಕ ಮಗುವನು
ಬೆಳೆಸೋದೂ ಹೇಗೆ ಹೇಳು ಇವಳನು
ಯೌವನ ತುಂಬುವ ಆ ಕಾಲಾ
ಬರುವುದು ಇನೆಂದು
ಪ್ರೀತಿಯ ಕಾಣುವ ಆ ವಯಸೂ
ಅರಳುವುದಿನೆಂದು
ಅಮ್ಮಮ್ಮ ನಾ ಕಾಣೆ
ಸುಳ್ಳಲ್ಲಾ ನನಾಣೆ
ನೋಡಪ್ಪಾ ನನಗೆ ಸಿಕ್ಕ ಮಗುವನು
ಬೆಳೆಸೋದೂ ಹೇಗೆ ಹೇಳು ಇವಳನು

ಯಾರು ಕಾಣದಾ ಹೊಸ ರೀತಿ ಈ ಮಗು
ಯಾರು ಕಾಣದೆಂದೂ ಇವಳ ಹೂನಗು
ಯಾರು ಕೇಳರೂ ಇವಳಾಡೋ ಮಾತನು
ಕೆನೆ ಕಾಣದೆಂದೂ ಒಂದು ಮುತ್ತನು
ಹೂವಂತೆ ಈ ಕೆನೆ ಸವರುತಲಿರುವಾಗ
ಜೇನಂತೆ ಚೆಂದುಟಿಯು ಕಿಲಕಿಲ ಎನುವಾಗ
ಅಮಾರ ಗಿಣಿಮರಿ ಗಿಣಿಕರಿ ಮಣಿಮಿಣಿ
ಮಿಣಿ ಲಾಲಿ ಲಾಲೀ ಜೋಲಾಲೀ

ನೋಡಪ್ಪಾ ನನಗೆ ಸಿಕ್ಕ ಮಗುವನು
ಹೊಳಲೊಳಲಾಯೀ
ಬೆಳೆಸೋದೂ ಹೇಗೆ ಹೇಳು ಇವಳನು
ಹೊಳಲೊಳಲಾಯೀ
ಹೂಂಹೂಂಹೂಂ
ಹೋಹೋಹೋ ಹೋಹೋ
ಅರೆ ಹಾಹಾ ಲಲ ಲಲ ಲಲ್ಲಲಾ

ನೂರು ಹೆಣ್ಣನೂ ದಿನ ನೋಡಿ ಬಂದೆನು ಹಾಂ
ಯಾರು ಬೇಡವೆಂದೂ ಓಡಿ ಹೋದೆನೂ
ನೋಡಿ ಹಿಗ್ಗಿದೆ ಈ ಹೆಣ್ಣ ಕಣ್ಣನು
ಅಂದಗಾತಿಯೆಂದು ಒಪ್ಪಿಕೊಂಡೆನು
ಇವಳೆಂಥಾ ಹೆಣ್ಣೆಂದು ಅರಿತೆನು ನಾನೀಗಾ
ಅಮ್ಮಮ್ಮಾ ಗತಿಯೇನು ತಿಳಿಯೆನು ನಾನೀಗಾ
ನನ ಚಿಣಿಮಣಿ ಕಣ್ಮಣಿ ಚಿನ್ಮತ ಗಣಿಗಣಿ
ಲಾಲಿ ಲಾಲೀ ಜೋಲಾಲೀ
ನೋಡಪ್ಪಾ ನನಗೆ ಸಿಕ್ಕ ಮಗುವನು
ಬೆಳೆಸೋದೂ ಹೇಗೆ ಹೇಳು ಇವಳನು
ಯೌವನ ತುಂಬುವ ಆ ಕಾಲ
ಬರುವುದು ಇನೆಂದು
ಪ್ರೀತಿಯ ಕಾಣುವ ಆ ವಯಸು
ಅರಳುವುದಿನೆಂದು
ಅಮ್ಮಮ್ಮ ನಾ ಕಾಣೆ
ಸುಳ್ಳಲ್ಲಾ ನನಾಣೇ

ನೋಲಪ್ಪಾ ನನಗೆ ತಿಕ್ಕ ಮಗುವನು ಹಹಾ ಹಹಹಾ
ಬೆಳೆಸೋದೂ ಹೇಗೆ ಹೇಳು ಇವಳನೂ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.